ಅಕ್ರಮ-ಸಕ್ರಮ ನಿಯಮಗಳಲ್ಲಿ ದೋಷ

1643 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಲ್ಲಿ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಕ್ರಮ ನಿಬಂಧನೆಗಳನ್ನು ಯಾವ ಆಧಾರದ ಮೇಲೆ ರೂಪಿಸಲಾಗಿದೆ?

ಆ) ರೈತರಿಗೆ ಇದರಿಂದಾಗುವ ಅನ್ಯಾಯವನ್ನು ಸರಿಪಡಿಸಲಾಗುವುದೇ?

ಶ್ರೀ ರಮೇಶ್ ಸಿ. ಜಗಜಿಣಗಿ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಕ್ಕೆ ತಿದ್ದುಪಡಿ ಮಾಡಿ 1991ರಲ್ಲಿ ಕಲಂ 94ಎ, ಇದನ್ನು ಕಾಯ್ದೆಯಲ್ಲಿ ಸೇರ್ಪಡಿಸಲಾಗಿದೆ. ಸದರಿ ಕಾಯ್ದೆ ಅಡಿಯಲ್ಲಿ ಮಾಡಲಾದ ಕಾನೂನಿಗೆ ಒಳಪಟ್ಟಂತೆ ನಿಯಮಗಳನ್ನು ರಚಿಸಲಾಗಿರುತ್ತದೆ.

ಆ) ಇದರಿಂದ ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಜಮೀನು ಮಂಜೂರು

1644 - ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಜಮೀನು ಮಂಜೂರು ಮಾಡುವಾಗ ಇಂಥಾದ್ದೆ ಬೆಳೆ ಬೆಳೆದಿರಬೇಕು ಎಂಬುದು ಕಡ್ಡಾಯ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ತಾಲ್ಲೂಕಿನಿಂದ, ತಾಲ್ಲೂಕಿಗೆ ಬೆಳೆಯುವ ಬೆಳೆಗಳು ವ್ಯತ್ಯಾಸ ಇರುವಾಗ ಈ ಕಡ್ಡಾಯ ಮಾಡಿರುವುದು ಸರಿಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಸಂಸ್ಥೆಗೆ ಕಂದಾಯ ಭೂಮಿ ಮಂಜೂರಾತಿ.

1645 - ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ, ಬೇಲೂರು ರಸ್ತೆಯಲ್ಲಿ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಎಂಬ ಸಂಸ್ಥೆಗೆ ಕಂದಾಯ ಭೂಮಿ ನೀಡಲಾಗಿದೆಯೇ??

ಆ) ಹಾಗಿದ್ದಲ್ಲಿ ಯಾವಾಗ ಮತ್ತು ಎಷ್ಟು ಎಕರೆ ಜಾಗ ನೀಡಲಾಗಿದೆ?